ರಾತ್ರಿ ಒಂಬತ್ತಕ್ಕೆ ಅವಳು ಮನೆಗೆ ಬಂದಳು. ಖುಷಿಯ ಮೂಡಲ್ಲಿದ್ದವಳು ಲತಾಳ ಹಿಂದಿ ಹಾಡನ್ನು ಗುನುಗುತ್ತ ಕುಕ್ಕರಿಟ್ಟಳು. ರಾತ್ರಿ ಪಕ್ಕದಲ್ಲಿ ಮಲಗಿದ್ದವಳ ಕೈಯನ್ನು ಸವರಿದ. 'ಸಾರಿ ಕಣೋ... ನಂಗೆ ಮೂಡಿಲ್ಲ' ಅಂದಳು. ಅಡುಗೆಗಿಡುವಾಗ ಅವಳು ರಾಜಕಪೂರ ಸಿನಿಮಾದ 'ಮೇರೆ ಸನಂ ಓ ಮೇರೆ ಸನಂ' ಹಾಡು ಗುನುಗುತ್ತಿದ್ದುದು ನೆನಪಾಗಿ ಕರುಬುಂಟಾಯಿತು. 'ಯಾರ ಸಂಗಡವೋ ಸುತ್ತಾಡಿ ಬಂದಂತಿದೆ?' ಅಂದುಬಿಟ್ಟ. ಅವಳು ಚಟಕ್ಕಂತ ಎದ್ದು ಕುಳಿತು 'ಮೈಂಡ್ ಯುವರ್ ಲ್ಯಾಂಗ್ವೇಜ್...' ಅಂದವಳು ದನಿಯಿಳಿಸಿ 'ನೋಡು, ನಾನು ನಿನ್ನ ಹೆಂಡತಿಯಲ್ಲ; ಎಳೆದಾಗ ಒಪ್ಪಿಸಿಕೊಳ್ಳಕ್ಕೆ. ಯಾಕೆ, ತನ್ನದು ಅಂತ ಒಂದು ಮೂಡು, ಸಮ್ಮತಿ, ಅಸಮ್ಮತಿ ಇರಲೇಕೂಡದ? ಗೌರವಿಸೋದು ಕಲ್ತುಕೋ' ಅತ್ತಕಡೆ ಮುಖಮಾಡಿ ಬಿದ್ದುಕೊಂಡಳು. ಮೂಗಿಂದ ಸೊರ್ರ ಅಂತ ಶಬ್ದ ಹೊರಟಿತು. ಥು! ತಾನು ದುಡುಕಬಾರದಿತ್ತು ಅಂತ ಹಳಹಳಿಸಿದ.

ಒಂದು ತಿಂಗಳಾಗುವಾಗ ಆಫೀಸಿನಲ್ಲಿ ಅದು ಹೇಗೋ ಒಬ್ಬಿಬ್ಬರಿಗೆ ವಾಸನೆ ಹೊಡೆಯಿತು. ರಾಜೀವ ಯಾರ ಹತ್ತಿರವೊ 'ಅವ್ನೆ ಲಕಿ ಕಣಪ್ಪ. ಸಾಕು ಅನಿಸಿದ ಗಳಿಗೇಲಿ ಸೂಟುಕೇಸೆತ್ತಿಕೊಂಡು ಹೋಗ್ತಾ ಇದ್ದರಾಯ್ತು. ಯಾವ ಜವಾಬ್ದಾರಿಯಿಲ್ಲ. ಯೋಚ್ನೆ ಮಾಡಬೇಕಾದ್ದು ಆ ಹೆಂಗ್ಸು' ಅಂತ ನಕ್ಕದ್ದು ಕೇಳಿಸಿಕೊಂಡ. ನೇರವಾಗಿಲ್ಲದ ಆದರೆ ತನ್ನನ್ನೆ ಉದ್ದೇಶಿಸಿದಂತಿದ್ದ ಮಾತಿನಲ್ಲಿ ತಾನಾಗಿ ಮೂಗು ತೂರಿಸುವ ಯಡವಟ್ಟಿಗೆ ಹೋಗದೆ, ಕೆಲಸದಲ್ಲಿ ಮಗ್ನವಾದಂತೆ ತೋರಿಸಿಕೊಂಡ. ರಾತ್ರಿ ಊಟ ಮಾಡುವಾಗ ಈ ವಿಷಯ ವಲ್ಲರಿಗೆ ತಿಳಿಸಿದ್ದಕ್ಕೆ ಅವಳು ಒಂದು ಕ್ಷಣ ಆಲೋಚಿಸುವಂತಿದ್ದು ಬಿಡು ಅತ್ಲಾಗಿ ಅನ್ನೋ ತರಾ 'ಪ್ಚ' ಸ್ವರ ಹೊರಡಿಸಿ ಊಟ ಮುಂದುವರಿಸಿದಳು. ಬೀನಾಳೊಂದಿಗೆ ಮತ್ತೆ ಭೆಟ್ಟಿಯಾಗಿರಲಿಲ್ಲ. ಆದರೆ ಔಪಚಾರಿಕವಾಗಿ ಫೇಸ್‌ಬುಕ್ಕಿನಲ್ಲಿದ್ದರು. ಈಗ ಎರಡುದಿನ ಹಿಂದೆ ನೋಡಿದಾಗ ಇವನನ್ನು ತೆಗೆದುಹಾಕಿದ್ದಳು. ಅವಳಿಗೂ ಗೊತ್ತಾಗಿರಬಹುದೆ ಎಂಬ ಗುಮಾನಿ ಬಂತು. ಹಾಳಾಗಲಿ ಅವಳು ಎಂಬಂತೆ ತಲೆ ಕೊಡವಿದ. ಸಣ್ಣ ಅಸಮಾಧಾನವೊಂದು ಉದ್ದಕ್ಕೂ ಹೆಡೆಯಾಡಿಸುತ್ತ, ಮಾಯವಾಗಲೇ ಇಲ್ಲ. ವಲ್ಲರಿ ಏನನ್ನೊ ತನ್ನಿಂದ ಮುಚ್ಚಿಡುತ್ತಿದ್ದಾಳೆ ಎಂಬ ಸಂದೇಹ ಆಗಾಗ ಬರುತ್ತಿತ್ತು. ಅಲ್ಲದೆ ಅವಳು ತನ್ನನ್ನು ಪೂರ್ತಿ ಕೊಟ್ಟುಕೊಳ್ಳುತ್ತಿಲ್ಲ, ಅಲ್ಲಿಲ್ಲಿ ತಡೆಹಿಡಿದು ಅಡ್ಡಿಪಡಿಸುತ್ತಾಳೆ ಎಂಬ ಅತೃಪ್ತಿ ಪ್ರತಿಸಾರಿ ಇರುತ್ತಿತ್ತು. ಅವಳಿಗೂ ತನ್ನಬಗ್ಗೆ ಹಾಗೇ ಅನಿಸುತ್ತಿರಬಹುದೆ ಎಂಬ ಸಂಶಯವೂ ಬರುತ್ತಿತ್ತು. ಒಮ್ಮೊಮ್ಮೆ ಈ ಅತೃಪ್ತಿ ಕಿರಿಕಿರಿಯ ರೂಪದಲ್ಲಿ ಆಫೀಸಿಗೂ ನೆರಳಾಗಿ ಬರುತ್ತಿತ್ತು. ಒಂದು ಮಧ್ಯಾಹ್ನ ಊಟದ ಸಮಯದಲ್ಲಿ ಅವಳಿಗೆ ಫೋನ್ ಮಾಡಿದ. ಊಟವಾಯ್ತಾ ಅಂತ ವಿಚಾರಿಸಿದ. ಅವಳು ಖುಷಿಪಟ್ಟು ಲವಲವಿಕೆಯಿಂದ ಮಾತಾಡಿದಳು. ಮರುದಿನ ಕರೆಮಾಡಿದರೆ ತೆಗೆದುಕೊಳ್ಳಲಿಲ್ಲ. ಆಮೇಲೆ ಕರೆಮಾಡಿ ಸೀನಿಯರ್ ಜೊತೆ ಡಿಸ್ಕಶನ್ನಲ್ಲಿದ್ದೆ, ಏನಾದರು ವಿಶೇಷವಿತ್ತಾ ಅಂತ ವಿಚಾರಿಸಿದಳು. ದನಿಯಲ್ಲಿ ಆಯಾಸವಿದ್ದಂತೆನಿಸುತ್ತಿತ್ತು. 'ಹಾಗೇನಿಲ್ಲ ಸುಮ್ಮನೇ...' ಅಂತ ಕರೆ ತುಂಡರಿಸಿದ. ವಿಶೇಷವಿದ್ರೆ ಮಾತ್ರ ಮಾಡಬೇಕಾ ಅನ್ನೋ ಮಾತು ಹೊರಬರಲಿಲ್ಲ. ವಾಲಂಟೈನ್ ಡೇ ದಿನ ಹೊರವಲಯದ ರೆಸಾರ್ಟೊಂದರಲ್ಲಿ ಊಟ ಏರ್ಪಡಿಸಿಕೊಂಡರು. ಅವನೇ ಆರಿಸಿದ ಚೂಡಿದಾರಿನಲ್ಲಿ ಆಕರ್ಷಕವಾಗಿ ಕಾಣುತ್ತಿದ್ದಳು. ತೋರಿಸದೇ ತಂದಿಟ್ಟುಕೊಂಡು ಉಡುಗೊರೆ ಕೊಟ್ಟ ವಾಚು ಅವಳಿಗೆ ಮೆಚ್ಚುಗೆಯಾಗಿ ಖುಷಿಪಟ್ಟಳು. ಮರುದಿನ ಅದೇ ಚೂಡಿದಾರ್ ಧರಿಸಿ ಆಫೀಸಿಗೆ ಹೊರಟವಳನ್ನು 'ಇದರಲ್ಲೆ ಆಫೀಸಿಗೆ ಹೋಗತೀಯ?' ಕೇಳಿದ. ದನಿ ಸಣ್ಣ